ಟಿ.ಎಂ. ಶೇಷಗಿರಿ ತುಮರಿ

ಕಲೆ: ಪ್ರವೀಣ್ ಆಚಾರ್ಯ

# ಅಜ್ಜಿಯ ಆಸೆ

ವಯಸ್ಸಾದ ಹಲವಾರು ಅಜ್ಜಿಯರು ನಿತ್ಯ ನನಗೆ ಎಡತಾಕುತ್ತಿರುತ್ತಾರೆ. ಈ ಅಜ್ಜಿಯರೆಂದರೆ ನನಗೆ ಯಾಕೋ ಒಂದು ರೀತಿಯ ಪ್ರೀತಿ. ಅಷ್ಟೆಲ್ಲಾ ವರ್ಷಗಳ ಜೀವನಾನುಭವ ನನಗೆ ಅವರ ಬಗ್ಗೆ ಗೌರವ, ಅನುಕಂಪ, ಪ್ರೀತಿ ಹೆಚ್ಚಿಸುತ್ತದೆ. ಬಾಲ್ಯದಲ್ಲಿ ತಂದೆ ತಾಯಿ ಸುತ್ತಲಿನ ಸಮಾಜದ ನಿರ್ಲಕ್ಷ್ಯಕ್ಕೆ ಅವರು ಗುರಿಯಾಗಿರುತ್ತಾರೆ. ಮದುವೆಯಾದ ಮೇಲೆ ಗಂಡ ಹಾಗೂ ಗಂಡನ ಮನೆಯವರ ಶೋಷಣೆ. ಕೊನೆಗೆ ಮಕ್ಕಳಾದ ಮೇಲೆ ಮಕ್ಕಳ ಕಾಟ. ಹೀಗೆ ಸದಾ ಅವರು ನರಳುತ್ತಲೇ ಇರುತ್ತಾರೆ ಎಂದು ನನಗೆ ಅನಿಸುತ್ತಲೇ ಇರುತ್ತದೆ. ಕೆಲವು ಮಹಿಳೆಯರಿಗಂತೂ ಸ್ವಾತಂತ್ರ್ಯವೆಂಬುದೇ ಇರುವುದಿಲ್ಲ. ನನಗೆ ಹೀಗನಿಸುವುದು ತಪ್ಪಿರಬಹುದು ಎಂದು ನನಗೆಂದೂ ಅನಿಸುವುದೇ ಇಲ್ಲ. ಬಹಳ ಸುಖವಾಗಿ, ಆರ್ಥಿಕವಾಗಿ ಗಟ್ಟಿಯಾಗಿರುವ, ಸ್ವತಂತ್ರವಾಗಿರುವ ಅಜ್ಜಿಯರನ್ನೇ ನಾನು ನೋಡಿಲ್ಲ.

ತುಮರಿಯ ಪೇಟೆಯಲ್ಲಿ ರಸ್ತೆ ಪಕ್ಕದಲ್ಲಿ ನನ್ನ ಟೈಲರಿಂಗ್ ಅಂಗಡಿ ಇದೆ. ಟೈಲರಿಂಗ್ ವೃತ್ತಿ ನಾನು ಕೈಗೊಂಡ ಇತ್ತೀಚಿಗಿನ ಉದ್ಯೋಗ. ಸುತ್ತಮುತ್ತಲಿನ ಹಲವಾರು ಊರಿನವರು ಇಲ್ಲಿಗೆ ಬರುತ್ತಾರೆ. ಸಾಮಾನ್ಯವಾಗಿ ಮಹಿಳೆಯರಿಗಿಂತ ಪುರುಷರ ಬಟ್ಟೆಯನ್ನೇ ನಾನು ಹೆಚ್ಚು ಹೊಲಿಯುವುದಾದರೂ ಕೆಲವೊಮ್ಮೆ ಮಹಿಳೆಯರೂ ಈ ವಿಷಯಕ್ಕೆ ನನ್ನ ಬಳಿ ಬರುವುದುಂಟು. ಅವರ ಒತ್ತಾಯಕ್ಕೆ ಅವರ ಬಟ್ಟೆ ಹೊಲಿದು ಕೊಟ್ಟಿದ್ದೂ ಇದೆ. ಆದರೆ, ಹಲವು ಅಜ್ಜಿಯರು ನನ್ನ ಅಂಗಡಿಗೆ ಬರುತ್ತಿರುವುದಕ್ಕೆ ಬೇರೆ ಕಾರಣವೇ ಇದೆ. ಅದು ನನ್ನ ಕವಳದ ಸಂಚಿ.

ಈ ಕವಳದ ಸಂಚಿಗೆ ಬೇರೆಯ ಕಥೆಯೂ ಇದೆ. ನಾನು ಭಾರೀ ಎಲೆ ಅಡಿಕೆಯ ಕವಳ ಹಾಕುವವನಿರಬೇಕು ಎಂದು ನೀವು ಊಹಿಸತೊಡಗಿದರೆ ಅದು ತಪ್ಪು.

ಯಾಕೆಂದರೆ, ನಾನು ಎಲೆ ಅಡಿಕೆ ಹಾಕುವವನೇ ಅಲ್ಲ. ನನ್ನ ಅಜ್ಜಿ ಬದುಕಿದ್ದಾಗ ಭಾರೀ ಕವಳ ಹಾಕುತ್ತಿದ್ದಳು. ಆಗೆಲ್ಲಾ ಅಜ್ಜಿ ಎಂದರೆ ನನಗೆ ತುಂಬಾ ಪ್ರೀತಿ. ಈ ಅಜ್ಜಿಯಿಂದಾಗಿಯೇ ನಾನು ಬದುಕಿದ್ದು ಎಂದು ಅಮ್ಮ ಹೇಳುತ್ತಾಳೆ. ನಾನು ಎರಡು ವರ್ಷದವನಿದ್ದಾಗ ಯಾವುದೋ ಕಾಯಿಲೆ ಬಂದು ನಾನು ಸತ್ತುಹೋಗುವ ಸ್ಥಿತಿಯಲ್ಲಿದ್ದೆ. ಯಾವ್ಯಾವುದೋ ಔಷಧಿ ಮಾಡಿ ನನ್ನನ್ನು ಬದುಕಿಸಿದವಳು ನನ್ನಜ್ಜಿ. ಅವಳು ಹೇಳುತ್ತಿದ್ದಳು: ಈ ಎಲೆ ಅಡಿಕೆ ಕವಳ ಯಾರಿಗಾದರೂ ಕೊಟ್ಟರೆ ಒಂದು ಊಟ ಹಾಕಿದ ಪುಣ್ಯ ಬರುತ್ತದೆ. ನನ್ನ ಅಮ್ಮನೂ ಅದನ್ನು ಹೇಳುತ್ತಾ ಬಂದಿದ್ದಳು. ಇದು ಹೇಗೋ ನನ್ನ ತಲೆಯಲ್ಲಿ ಉಳಿದುಬಿಟ್ಟಿತು. ಮತ್ತು ನಾನು ಕವಳ ಹಾಕದಿದ್ದರೂ ಕವಳ ಹಾಕುವವರಿಗೆಂದು ಸಂಚಿ ಇಟ್ಟುಕೊಳ್ಳುವಂತಾಯಿತು. ಸ್ವತಃ ನಾನು ಅಡಿಕೆ ಬೆಳೆಗಾರ.